ವಿ. ಹೇಮಂತಕುಮಾರ, ಬೆಂಗಳೂರು

*ಹುಡುಗಿಯರು ಕೆನ್ನೆ ಕೊಡದಿದ್ದರೆ ಹುಡುಗರು ಮುತ್ತು ಕೊಡುವುದು ಹೇಗೆ?*



ನಿಮ್ಮ ಶೃಂಗಾರಜ್ಞಾನದ ಮಟ್ಟ ತಿಳಿಯಿತು; ಹಣೆಗೆ ಮುತ್ತನಿತ್ತು ಹೊರನಡೆಯಿರಿ.

ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು

*ನಟನಟಿಯರು ಪಾರ್ಕಿನಲ್ಲಿ ಕುಣಿದರೆ ಹಣ ಕೊಟ್ಟು ನೋಡುತ್ತಾರೆ. ಅದೇ ಪ್ರೇಮಿಗಳು ಆಡಿದರೆ...?*

ಪಾರ್ಕಿನ ಮಾಲಿ, ಪೇದೆಯರು ಹಣ ಪಡೆಯಲು ನೋಡುತ್ತಾರೆ.

ಸೃಜನ ಜೈನ್, ಹೂವಿನಹಡಗಲಿ

*ಸಿಕ್ಸ್ ಪ್ಯಾಕ್ ಮೋಹ ನಿಮಗೇಕಿಲ್ಲ ಸಾರ್?*

ಮೊದಲಿನಿಂದ ಹೋಲ್‌ಸೇಲ್ ಮೋಹ ಇರುವ ನನಗೆ ಸಿಕ್ಸ್ ಇನ್ ಒನ್ನೇ ಪ್ರಿಯ.

ಬೂಕನಕೆರೆ ವಿಜೇಂದ್ರ, ಮೈಸೂರು

*ಸಾಹಿತಿಗಳೇಕೆ ಗಡ್ಡ ಬಿಡುತ್ತಾರೆ?*

ವಿಮರ್ಶಕರ ಮಾತಿಗೆ ಮುಖ ರಂಗೇರಿದ್ದನ್ನು/ಕಪ್ಪಿಟ್ಟಿದ್ದನ್ನು ಮರೆಮಾಚಲು!

ಅಮರಯ್ಯಾ ಪತ್ರಿಮಠ, ಸುರಪೂರ

*ಕಣ್ಣಿದ್ದೂ ಕುರುಡರಾದವರು ಯಾರು?*



ಸಿನೆಮಾ ಶುರುವಾದ ನಂತರ ಥಿಯೇಟರೊಳಗೆ ಕಾಲಿಟ್ಟವರು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಮುತ್ತು ಕೊಟ್ಟರೆ ಹಿತವೋ, ಪಡೆದರೆ ಹಿತವೋ?*

ಮುತ್ತನ್ನು ಮಾತ್ರ ಸಾಲ ಇಟ್ಟುಕೊಳ್ಳಬಾರದು; ಪಡೆದಷ್ಟನ್ನೂ ಬಡ್ಡಿ ಸಮೇತ ಕೊಟ್ಟುಬಿಡಿ. ಅದೇ ಹಿತ.

ನರಸಿಂಹ ಪೈ, ಕಾಸರಕೋಡ

ಮಟ್ಕಾಗೂ, ಗುಟ್ಕಾಗೂ ಏನು ವ್ಯತ್ಯಾಸ?

ಮಟ್ಕಾದಿಂದ ದೇಶದ ವಿತ್ತಕ್ಕೆ ರೋಗ; ಗುಟ್ಕಾದಿಂದ ದೇಹಕ್ಕೆ, ಚಿತ್ತಕ್ಕೆ ರೋಗ!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಪ್ರಾಯದ ಅಭಿಪ್ರಾಯಕ್ಕೂ, ವಯಸ್ಸಾದವರ ಅಭಿಪ್ರಾಯಕ್ಕೂ ವ್ಯತ್ಯಾಸವೇನು?*

ಪ್ರಾಯದ ಅಭಿಪ್ರಾಯ ಪ್ರವಾಹದಂತೆ; ವಯಸ್ಸಾದವರ ಅಭಿಪ್ರಾಯ ಕಾಲುವೆಯ ನೀರಿನಂತೆ.

ಎಸ್.ಎನ್. ಮಹಾಬಲರಾವ್, ಎನ್ನಾರ್ ಪುರ

*ಮದುವೆ ಬಲವಂತದ್ದಾದರೆ ಸಂಸಾರ?*

ಎಡವಟ್ಟು.

ಎಂ.ಎ. ಕುಮಾರ್, ಬೆಂಗಳೂರು

*ಖರ್ಚಿಲ್ಲದೆ ವಾಸಿಯಾಗುವ ಕಾಯಿಲೆ ಯಾವುದು?*

ಲೀವ್ ಲೆಟರ್‌ಗೆಂದೇ ಸೃಷ್ಟಿಸಲ್ಪಟ್ಟ ಏಕದಿನದ ಕಾಯಿಲೆ.

ಪಿ.ಜೆ. ರಾಘವೇಂದ್ರ, ಮೈಸೂರು

*ಮಹಿಷಾಸುರನೇ ಮೈಸೂರಿನ ಬುದ್ಧಿಜೀವಿಗಳ ಕುಲದೇವರಂತೆ...?*

ಛೆ! ಪಾಪ! ಬುದ್ಧಿಜೀವಿಗೆ ಹೋಲಿಸಿದುದನ್ನು ಕೇಳಿದ ಮಹಿಷಾಸುರ ಮಾನಸಿಕ ಖಿನ್ನತೆಗೆ ಒಳಗಾದನಂತೆ.

ಹೆಚ್.ಎಸ್. ಶಿವಶಂಕರ್, ಬೆಂಗಳೂರು

*ಬೆಂಗಳೂರಿನಲ್ಲಿ ಸಿಗ್ನಲ್ ಹಸಿರು ಬಿದ್ದಾಕ್ಷಣ ಹಿಂದಿರುವವರೆಲ್ಲ ಒಟ್ಟಿಗೆ ಹಾರನ್ ಮಾಡುವುದೇಕೆ?*

ಮುಂದಿರುವವ ಮೊಬೈಲ್ ನೋಡುತ್ತಾ ನಿಂತುಬಿಟ್ಟಾನೆಂಬ ಭಯ!

ಟಿ.ಎಂ. ಮಾನಪ್ಪ, ಶಿವಮೊಗ್ಗ

*ವಯಸ್ಸಿಗೆ ಬಂದವರು ಎಂದರೆ ಯಾರು?*

ಹೇಳಿದುದಕ್ಕೆಲ್ಲ ಸುಮ್ಮನೆ ಗೋಣಾಡಿಸುತ್ತಾ ಎಸ್ ಎನ್ನದೆ ವೈ ಎನ್ನುವವರು.

ಪಿ. ಚಿದಾನಂದ, ಜವನಗೊಂಡನಹಳ್ಳಿ

*ಭೂಮಿಯಿಂದ ಸ್ವರ್ಗ- ನರಕಗಳು ಎಷ್ಟು ದೂರ ಇವೆ?*

ಅವೆರಡೂ ಭೂಮಿಯಲ್ಲೇ, ನಿಮ್ಮ ಕೈಯಲ್ಲೇ ಇವೆ. ಸ್ವಚ್ಛತೆಯೇ ಸ್ವರ್ಗ, ಮಲಿನತೆಯೇ ನರಕ.

## ಬಹುಮಾನಿತ ಪ್ರಶ್ನೆ

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಸಹಜ ಸಾವಿಗೂ, ಅಸಹಜ ಸಾವಿಗೂ ವ್ಯತ್ಯಾಸವುಂಟೆ?*

ಉಂಟು. ಸಹಜ ಸಾವಿಗೆ 5ನೆ ಪುಟ 2ನೆ ಕಾಲಂ; ಅಸಹಜ ಸಾವಿಗೆ ಫ್ರಂಟ್ ಪೇಜ್.

ಅನಂತಪದ್ಮನಾಭ ಹೆಚ್.ಎಂ., ಮೈಸೂರು

*ದಿನಾ ಕನಸಿನಲ್ಲಿ ಅದೇ ಹೆಂಡತಿಯ ಬದಲು ಸುಂದರ ಹುಡುಗಿಯರನ್ನು ಕಾಣಲು ಏನು ಮಾಡಬೇಕು?*

ಅದೇ ಗೋಳಿನ ಸೀರಿಯಲ್ ಬದಲು ಎಂಟಿವಿ, ಎಫ್‌ಟಿವಿ ನೋಡುತ್ತಾ ಮಲಗಿ.

ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ

*ನೀವು ನಿಮ್ಮ ಪತ್ನಿಗೆ ಹೊಡೆಯುವುದನ್ನು ನಿಲ್ಲಿಸಿದ್ದೀರಾ?*

ಊಹೂಂ; ಅಂದಿನಿಂದ ಇಂದಿನವರೆಗೆ ಹೊಡೆಯುತ್ತಲೇ ಇದ್ದೇನೆ – ಪೂಸಿ.

ದೇವೇಂದ್ರ, ಕಡೂರು

*ಅಮೂಲ್ಯವಾದದ್ದು ಕೆಲವೊಮ್ಮೆ ಅನರ್ಹರ ಕೈ ಸೇರಿರುತ್ತಂತೆ. ಹೌದಾ ಸಾರ್?*



ಅಂದಿನ ನಿರ್ಮಲ ಪರಿಸರ ನಮ್ಮ ಕೈ ಸೇರಿರುವದಕ್ಕಿಂತ ಉದಾಹರಣೆ ಬೇಕೇ!

ಕೆ.ಪಿ. ಸುಜ್ಞಾನಾಚಾರ್ಯ, ಕಲಿಕೆರೆ

*ಅಂದಿನ ಮೋಹಿನಿ ನೋಡೋಕೆ ಹೇಗಿದ್ದಳು?*

ರಸಿಕರಿರಲಿ, ಜಡ ವಸ್ತುಗಳೂ ಸಾಮೀಪ್ಯ ಬೇಡುವ ಹಾಗೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಪ್ರಿಯತಮೆ ಸಾರಿ ಎನ್ನುವುದಕ್ಕೂ, ಡಾಕ್ಟರ್ ಸಾರಿ ಎನ್ನುವುದಕ್ಕೂ ಏನು ವ್ಯತ್ಯಾಸ?*

ಅವಳೆಂದಾಕ್ಷಣ ಅಂತಿಮ ಪ್ರಣಯ; ಇವರೆಂದಾಕ್ಷಣ, ಅಂತಿಮಪಯಣ.

■ ರಾಮ್